ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

ಹೇಳಿಕೆ ಹಾಳೆ
(ಆರ್.ಪಿ. ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.ಃ 307/2023</u>

........................................................................

CW 04
PW 03

| | | |
|---|---|---|
| ಹೆಸರು | ಃ | ಪುಂಡಲೀಕ ಮಾದಪ್ಪಗೌಡ್ರ |
| ತಂದೆಯ ಹೆಸರು | ಃ | ನಿಂಗಪ್ಪ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಕೃಷಿ ಕೆಲಸ |
| ವಾಸಸ್ಥಳ | ಃ | **ಬೆಳವಟಗಿ, ತಾಃ ಹಳಿಯಾಳ.** |

ದಿನಾಂಕ 27-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ಮತ್ತು 5, ರವರು ಪರಿಚಯ ಇದ್ದಾರೆ. ಉಳಿದವರು ಪರಿಚಯ ಇಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಪಂಚನಾಮೆಯನ್ನು ಈಗಾಗಲೇ **ನಿಪಿ 2 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಎರಡು ಸಹಿಯನ್ನು **ನಿಪಿ2 ಬಿ ಎಂದು** ಗುರುತಿಸಲಾಯಿತು. ಹಿಂದೆ ಸದರಿ ಸಹಿಯನ್ನು ಜನತಾ ಕ್ರಾಸ್ ಕ್ಕಿಂತ ಮುಂದೆ ಬೆಳವಟಗಿ ಗಿಂತ ಹಿಂದೆ ಮಾಡಿರುತ್ತೇನೆ. ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿಪೊಲೀಸರು ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿ. ಸದರಿ ಭಾವಚಿತ್ರಗಳನುನ ಈಗಾಗಲೇ ನಿಪಿ 4 ಮತ್ತು 5 ಎಂದು ಗುರುತಿಸಲಾಗಿದೆ. ಸದರಿ ಭಾವಚಿತ್ರಗಳಲ್ಲಿ ತಾವು, ಚಾಸಾ 5 ಮತ್ತು 10 ಮತು ಪೊಲೀಸರು ಇರುತ್ತೇವೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಕಚ್ಚಾ ನಕಾಶೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಕಚ್ಚಾ

ನಜಾಶೆಯನ್ನು **ನಿಪಿ 8 ಎಂದು,** ಸಾಕ್ಷಿಯ ಎರಡು ಸಹಿಯನ್ನು **ನಿಪಿ8 ಎ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ವಾಹನ ತಡೆ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ವಾಹನ ತಡೆ ಪಂಚನಾಮೆಯನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಎರಡು ಸಹಿಯನ್ನು **ನಿಪಿ 3 ಬಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿ. ಸದರಿ ಭಾವಚಿತ್ರಗಳಲ್ಲಿ ತಾವು, ಚಾಸಾ 5 ಮತ್ತು 10 ಮತು ಪೊಲೀಸರು ಇರುತ್ತೇವೆ ಎಂದು ನುಡಿಯುತ್ತಾರೆ. ಅವುಗಳನ್ನು **ನಿಪಿ 9 ಮತ್ತು 10 ಎಂದು** ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 10-11-2022 ರಂದು ನಿಮ್ಮನ್ನು ಮತ್ತು ಚಾಸಾ 5 ರವರನ್ನು ಠಾಣೆಗೆ ಕರೆಯಿಸಿ ನಿಮಗೆ ಮುರ್ಕವಾಡ ಬೆಳವಟಗಿ ಸೋಮನಿಂಗ ಬಡಂಗಿ ರವರ ಜಮೀನಿನ ಸಮೀಪ ಇರುವ ರಸ್ತೆಯ ಮೇಲೆ ಇದೆ ಜಾಗದಲ್ಲಿ ಎರಡೂ ವಾಹನಗಳು ಡಿಕ್ಕಿ ಹೊಡೆದು ಅಪಘಾತ ಆಗಿದೆ ಎಂದು ಹೇಳಿ, ಸದರಿ ಜಾಗದಲ್ಲಿ ನಿಮ್ಮ ಸಮಕ್ಷಮ ಬೆಳಗ್ಗೆ 10-30 ರಿಂದ 11-30 ರ ವರೆಗೆ ಪಂಚನಾಮೆ ಮಾಡಿ, ನಿಮಗೆ ಓದಿ ಹೇಳಿದ ನಂತರ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಕಚ್ಚಾ ನಕಾಶೆಯನ್ನು ಮತ್ತು ನಿಪಿ 4 ಮತ್ತು 5 ರಂತೆ ಭಾವಚಿತ್ರವನ್ನು ತೆಗೆದರು ಎಂದರೆ ಸರಿಯಲ್ಲ. ಅದೇ ದಿನ ಚಾಸಾ 10 ರವರು ಠಾಣೆಯಲ್ಲಿ ಅಪಘಾತಕ್ಕೋಳಪಟ್ಟ ವಾಹನಗಳು ತೋರಿಸಿದರು ಆಗ ನಿಮ್ಮ ಮತ್ತು ಚಾಸಾ 5 ರವರ ಸಮಕ್ಷಮ ಮಧ್ಯಾಹ್ಣ 12-00 ರಿಂದ 01-00 ಗಂಟೆಯ ವರೆಗೆ ಪಂಚನಾಮೆ ಮಾಡಿ, ನಿಮಗೆ ಓದಿ ಹೇಳಿದ ನಂತರ ಸಹಿ ಮಾಡಿರುತ್ತೀರಿ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಕಚ್ಚಾ ನಕಾಶೆಯನ್ನು ಮತ್ತು ನಿಪಿ 9 ಮತ್ತು 10 ರಂತೆ ಭಾವಚಿತ್ರವನ್ನು ತೆಗೆದರು ಎಂದರೆ ಸರಿ. ನಿಮಗೆ ಪಂಚನಾಮೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಸ್ ಎಲ್ ಎಸ್ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.